**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 42/2023**

**ಚಾ.ಸಾ. :-5**
**ಪ್ರಾ.ಸಾ. :-3**

| | |
|---|---|
| ಹೆಸರು | : ಜಗದೀಶ್ |
| ತಂದೆಯ ಹೆಸರು | : ದೇಕಪ್ಪ |
| ವಯಸ್ಸು | : 45 ವರ್ಷ |
| ಉದ್ಯೋಗ | : ಕಂಡಕ್ಟರ್ |
| ವಾಸಸ್ಥಳ | : ಶಿವಮೊಗ್ಗ |

---

**ಪ್ರಮಾಣೀಕರಿಸಲಾದ ದಿನಾಂಕಃ- 27.04.2026.**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ಆರೋಪಿ ನಮ್ಮ ಬಸ್ಸಿನ ಚಾಲಕ. 6 ವರ್ಷಗಳ ಹಿಂದೆ ಆರೋಪಿ ನಮ್ಮ ಬಸ್ಸನ್ನು ಶ್ರೀರಂಗಪಟ್ಟಣದ ಕಿರಂಗೂರಿನ ಬಳಿ ಚಾಲನೆ ಮಾಡುತ್ತಿದ್ದು, ನಾನು ಟಿಕೇಟ್ ನೀಡುತ್ತಿದ್ದೆ. ಆ ಸಮಯದಲ್ಲಿ ಜೋರಾದ ಶಬ್ದ ಬಂದಿದ್ದು, ನಾನು ಟಿಕೇಟ್ ನೀಡುವುದನ್ನು ನಿಲ್ಲಿಸಿ ಬಸ್ಸಿನ ಕಿಟಕಿಯಿಂದ ಹೊರಗಡೆ ನೋಡಿರುತ್ತೇನೆ. ಅಪಘಾತವು ಎತ್ತಿನ ಗಾಡಿ ಮತ್ತು ದ್ವಿಚಕ್ರ ವಾಹನದ ನಡುವೆ ಆಗಿರುತ್ತದೆ. ಎತ್ತಿನ ಗಾಡಿ ನಮ್ಮ ಬಸ್ಸಿನ ಮುಂಭಾಗದಲ್ಲಿ ಹೋಗುತ್ತಿತ್ತು, ನಮ್ಮ ಬಸ್ ಸದರಿ ಗಾಡಿಯನ್ನು ಓವರ್ ಟೇಕ್ ಮಾಡಿಕೊಂಡು ಮುಂದೆ ಹೋಗುತ್ತಿದ್ದು, ಆ ಸಮಯದಲ್ಲಿ ಇದ್ದಕ್ಕಿದ್ದಂತೆ ದ್ವಿಚಕ್ರ ವಾಹನವೊಂದು ನಮ್ಮ ವಾಹನಗಳ ನಡುವೆ ಬಂದು ಎರಡೂ ವಾಹನಗಳನ್ನು ಓವರ್ ಟೇಕ್ ಮಾಡಲು ಪ್ರಯತ್ನಿಸಿರುತ್ತಾರೆ, ಆ ಸಮಯದಲ್ಲಿ ಎತ್ತಿನ ಗಾಡಿಗೆ ಬೈಕ್ ಗುದ್ದಿ ಅಪಘಾತ ಮಾಡಿಕೊಂಡಿರುತ್ತಾರೆ.

ನಾವು ವಾಹನ ನಿಲ್ಲಿಸಿ ನೋಡಿದಾಗ ಬೈಕಿನ Shock Observer ಗೆ ಎತ್ತಿನ ಚರ್ಮ ಅಂಟಿಕೊಂಡಿದ್ದು, ನಮ್ಮ ವಾಹನಕ್ಕೆ ಎತ್ತಿನ ಗಾಡಿಯಾಗಲೀ, ಬೈಕ್ ಆಗಲೀ ಟಚ್ ಆಗಿರುವುದಿಲ್ಲ ಹಾಗೂ ನಮ್ಮ ಬಸ್ಸಿನ ಚಕ್ರ ಗಾಯಾಳುವಿನ ಮೇಲೆ ಹರಿದಿರುವುದಿಲ್ಲ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ಸ.ಸ.ಅ.ರವರಿಂದ :**

ಆ ದಿನ ಬಸ್ಸಿನ ಚಾಲಕ ಬಸ್ಸನ್ನು ಅಜಾಗರೂಕತೆಯಿಂದ ಹಾಗೂ ಅತಿವೇಗವಾಗಿ ಚಾಲನೆ ಮಾಡಿ ಎತ್ತಿನ ಗಾಡಿಗೆ ಹಾಗೂ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿರುತ್ತಾರೆಂದರೆ ಸುಳ್ಳು. ನಿಪಿ-3 ರಲ್ಲಿ ಅಪಘಾತದ ಸ್ಥಳ ಕಾಣಿಸುತ್ತಿದೆ ಎಂದರೆ ಸರಿ. ನಿಪಿ-3 ರಲ್ಲಿ ಬಸ್ಸಿನ ಚಕ್ರದ ಗುರುತುಗಳು ಇರುತ್ತವೆ ಎಂದರೆ ಸರಿ. ಸದರಿ ಗುರುತುಗಳ ಪ್ರಕಾರ ನಮ್ಮ ಬಸ್ ಎತ್ತಿನ ಗಾಡಿಯನ್ನು ಓವರ್ ಟೇಕ್ ಮಾಡಲು ಬಲಭಾಗಕ್ಕೆ ಹೋಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಒಟ್ಟಿಗೆ ಎರಡು ವಾಹನಗಳು ಮಾತ್ರ ಹೋಗಬಹುದು ಎಂದರೆ ಸರಿ.

ಸಾಕ್ಷಿಯು ಪೊಲೀಸರ ಮುಂದೆ ನೀಡಿದ ಸಂಪೂರ್ಣ ಹೇಳಿಕೆಯನ್ನು ಸಾಕ್ಷಿಯವರಿಗೆ ಓದಿ ಹೇಳಲಾಗಿ ಸಾಕ್ಷಿಯು ಸದರಿ ಹೇಳಿಕೆಯನ್ನು ಪೊಲೀಸರಿಗೆ ನೀಡಿರುವುದಿಲ್ಲ ಎಂದು ನಿರಾಕರಿಸಿದ ಮೇರೆಗೆ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿ ಸಹೋದ್ಯೋಗಿಯಾದ ಕಾರಣ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**